**<u>ದಿ:-12-09-2024 ರ ಅಪರಾಹ್ನದಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿಸವಾಲು : ಪ್ರತಿವಾದಿ ನಂ.1 ಮತ್ತು 2 ರ ಪರ ಶ್ರೀ. ಕೆ.ವಿ.ಕೆ ವಕೀಲರಿಂದ :</u>**

1. ವಾದಿಗಳು ನನಗೆ 30 ವರ್ಷಗಳಿಂದ ಪರಿಚಯವಿರುತ್ತದೆ. ಅವರು ನನ್ನ ಸ್ಟಾಫ್ ಗಳಾಗಿರುತ್ತರೆ. ಅವರು ಪ್ರತಿವಾದಿಗಳನ್ನು ಯಾವತ್ತೂ ನೋಡಿರುವುದಿಲ್ಲ. ಅವರಿಗೆ ನ್ಯಾಯಾಯಕ್ಕೆ ಬಂದು ಸಾಕ್ಷ್ಯ ನುಡಿಯಲು ಆಗುವುದಿಲ್ಲ. ಈ ದಾವೆಯನ್ನು ಚಿಟ್ ಫಂಡಿನ ಮೊಬಲಗನ್ನು ನೀಡದ ಕಾರಣ ಹಾಕಿರುತ್ತೇನೆ. ನಾನು ವಾದಿಗಳ ಪರವಾಗಿ ನನ್ನ ಹೆಸರಿನಲ್ಲಿ ಪ್ರತಿವಾದಿಗಳ ಹತ್ತಿರ ಚೀಟಿಯನ್ನು ಹಾಕಿರುತ್ತೇನೆ. ವಾದಿಗಳ ಮತ್ತು ಪ್ರತಿವಾದಿಗಳ ನಡುವೆ ವೈಯುಕ್ತಿಕವಾಗಿ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿ.

2. ನನಗೆ ಅವರು ಜಿಪಿಎಯನ್ನು ಯಾವತ್ತು ನೀಡಿದ್ದಾರೆಂದು ದಿನಾಂಕ ನನಗೆ ಗೊತ್ತಿಲ್ಲ. ಕಲಾವತಿಯವರು ವೈದ್ಯರಾಗಿದ್ದು, ಪಾರ್ಥಸಾರಥಿಯವರು ಟೆಕ್ನಿಶಿಯನ್ ಆಗಿದ್ದು ಮತ್ತು ಅಂಬಾಬಾಯಿಯವರು ಗೃಹಿಣಿಯಾಗಿರುತ್ತಾರೆ. ಅವರ ವರಮಾನ ನನಗೆ ಗೊತ್ತಿಲ್ಲ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ಹೊರಗೆ ಬರುತ್ತದೆ ಎಂದು ಅವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ಸರಿಯಲ್ಲ.

3. ವಾದಿಗಳು ಯಾವತ್ತಾದರೂ ಚೀಟಿ ಹಾಕಿದ್ದಾರೆ ಎಂದು ತೋರಿಸಲು ದಾಖಲಾತಿ ಇದೆಯಾ ಎಂದರೆ ನ್ಯಾಯಾಲಯಕ್ಕೆ

ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ವಾದಿಗಳು ಎಷ್ಟ ಹಣಕ್ಕೆ ಮತ್ತು ಎಷ್ಟು ಕಂತಿಗೆ ಮತ್ತು ಎಷ್ಟು ಕಂತಿನ ಹಣಕ್ಕೆ ಚೀಟಿ ಹಾಕಿದ್ದಾರೆ ಎಂಬ ಬಗ್ಗೆ ನ್ಯಾಯಾಲಯಕ್ಕೆ ದಾಖಲಾತಿಯನ್ನು ಸಲ್ಲಿಸಿದ್ದೇನೆ. ಅವರು ಎಸ್.ಎಲ್.ವಿ ಚಿಟ್ ಫಂಡ್ ಮತ್ತು ಚಂದ್ರಶೇಖರ್ ರವರಲ್ಲಿ ಚೀಟಿಯನ್ನು ಹಾಕಿರುತ್ತಾರೆ. ವಾದಿಗಳು ಎಸ್.ಎಲ್.ವಿ ಚಿಟ್ ಫಂಡ್ ನ ಸದಸ್ಯರೂ ಅಲ್ಲ ಮತ್ತು ಅಲ್ಲಿ ಚೀಟಿ ಹಾಕಿಲ್ಲ ಎಂದರೆ ಸರಿಯಲ್ಲ.

4. ನಿ.ಪಿ.1 ಮತ್ತು 2 ನ್ನು ಪ್ರತಿವಾದಿ ನಂ.1 ರವರು ವಾದಿಗಳಿಗೆ ನೀಡಿಲ್ಲ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ಖಾಲಿ ಚೆಕ್ಕುಗಳನ್ನು ದುರುಪಯೋಗ ಪಡಿಸಿ ಈ ದಾವೆಯನ್ನು ಹೂಡಿದ್ದೇವೆ ಎಂದರೆ ಸರಿಯಲ್ಲ.

5. ನಾನು ಮೆಡಿಕಲ್ ಸೆಂಟರ್ ನಲ್ಲಿ ಕಳೆದ 30 ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. 2014-15 ರ ಸಾಲಿನಲ್ಲಿ ಮಾಸಿಕ 18-20 ಸಾವಿರ ವೇತನ ಬರುತ್ತಿತ್ತು. ಈ ಬಗ್ಗೆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ.

6. ಪ್ರತಿವಾದಿಗಳು ನನಗೆ 15 ವರ್ಷಗಳಿಂದ ಪರಿಚಯವಿರುತ್ತಾರೆ. ನನಗೆ ರತ್ನಾಕರ್ ರವರು ಅವರನ್ನು ಪರಿಚಯಿಸಿಕೊಟ್ಟಿರುತ್ತಾರೆ. ಎಸ್.ಎಲ್.ವಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಗೆ ಪ್ರತಿವಾದಿಗಳು ಎಂ.ಡಿ.ಗಳು ಎಂದು ತೋರಿಸುವ ಬಗ್ಗೆ ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಎಸ್.ಎಲ್.ವಿ

ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಗೆ ಪ್ರತಿವಾದಿ ನಂ.1 ಮತ್ತು 2 ರವರೇ ನಿರ್ದೇಶಕರಾಗಿರುತ್ತಾರೆ. ಈ ಬಗ್ಗೆ ನಾನು ಅವರು ಪ್ರತಿ ಸಲ ಚೀಟಿ ಮಾಡಿದಾಗ ಮತ್ತು ಲ್ಯಾಂಡ್ ಡೆವಲಪರ್ಸ್ ಬಗ್ಗೆ ಪ್ಲಾನ್ ನೀಡಿದ್ದರಿಂದ ಅವರು ನನಗೆ ನಿರ್ದೇಶಕರು ಎಂದು ಗೊತ್ತಾಗಿರುತ್ತದೆ.

7. ಎಸ್.ಎಲ್.ವಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ಯಾವಾಗ ಸ್ಥಾಪನೆಗೊಂಡಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಎಸ್.ಎಲ್.ವಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಚೀಟಿ ಹಾಕಿದ ಬಗ್ಗೆ ಮತ್ತು ನಾನು ಅದರಲ್ಲಿ ಸದಸ್ಯನೆಂಬ ಬಗ್ಗೆ ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ಎಸ್.ಎಲ್.ವಿ ಚಿಟ್ ಫಂಡ್ ಪ್ರೈವೇಟ್ ಲಿಮಿಟೆಡ್ ನಲ್ಲಿ ಸದಸ್ಯನೂ ಅಲ್ಲ ಮತ್ತು ನಾನು ಪ್ರತಿವಾದಿಗಳ ಚಿಟ್ ಫಂಡ್ ಗೆ ಸೇರಿಲ್ಲ ಮತ್ತು ನನ್ನ ಮತ್ತು ಪ್ರತಿವಾದಿಗಳ ನಡುವೆ ಯಾವುದೇ ಚಿಟ್ ಫಂಡ್ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ಬಿಟ್ಟರೆ ಆ ಚಿಟ್ ಫಂಡ್ ನಲ್ಲಿ ಸದಸ್ಯ ಎಂದು ತೋರಿಸಲು ಬೇರೆ ದಾಖಲಾತಿಗಳು ನನ್ನಲ್ಲಿ ಇವೆ. ಚೀಟಿಗೆ ಸೇರಿದ ದಿನದಂದಿನ ಸ್ಟೇಟ್ ಮೆಂಟುಗಳು ನನ್ನ ಬಳಿ ಇವೆ. ಅದನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಬಲ್ಲೆ.

8. ಪಾರ್ಥಸಾರಥಿ ಮತ್ತು ಕಲಾವತಿಯವರು ಒಟ್ಟು 2 ಚೀಟಿಗಳನ್ನು ಹಾಕಿದ್ದು ಅದು ತಲಾ 8 ಲಕ್ಷಕ್ಕೆ ಆಗಿರುತ್ತದೆ. 8 ಲಕ್ಷದ ಚೀಟಿಗೆ 32 ಕಂತುಗಳು ಮತ್ತು ಮಾಸಿಕ ರೂ.25,000/- ಕಟ್ಟಬೇಕಿತ್ತು.

ಯಾವ ತಿಂಗಳು ಯಾವ ವರ್ಷದಲ್ಲಿ ಚೀಟಿಯ ಹಣವನ್ನು ಕೊನೆಯದಾಗಿ ಚೀಟಿ ಕೂಗಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ಸಾಕ್ಷಿ ಮುಂದುವರಿದು ಅದು ಕೊನೆಯ ಚೀಟಿಯಾಗಿರುತ್ತದೆ ಎಂದು ನುಡಿಯುತ್ತಾರೆ.

9. ವಾದಿಗಳು ನಿಜವಾಗಿಯೂ ಚೀಟಿ ಫಂಡಿಗೆ ಸೇರಿ ಹಣವನ್ನು ಪಡೆದಿದ್ದರೆ ಅವರ ವಾದ ಪತ್ರದ ಖಂಡಿಕೆ 3 ಮತ್ತು 4 ರಲ್ಲಿ ಅದರ ದಿನಾಂಕ ಮತ್ತು ವರ್ಷಗಳನ್ನು ನಿಖರವಾಗಿ ನಮೂದಿಸುತ್ತಿದ್ದರು ಎಂದರೆ ಸರಿಯಲ್ಲ.

10. ನಾನು ನನ್ನ ವಕೀಲರಿಗೆ ಚೀಟಿ ನಂಬರು ಮಾಹಿತಿಯನ್ನು ಸಂಪೂರ್ಣವಾಗಿ ನೀಡಿರುತ್ತೇನೆ. ನಾನು ನನ್ನ ವಾದ ಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ. ವಾದ ಪತ್ರಕ್ಕೆ ಸಹಿ ಹಾಕುವಾಗ ಅದರಲ್ಲಿ ಚೀಟಿಯ ಬಗ್ಗೆ ದಿನಾಂಕ, ವರ್ಷಗಳನ್ನು ನಮೂದಿಸಿಲ್ಲ ನಮೂದಿಸಿ ಎಂದು ಹೇಳಲು ಏನಾದರೂ ತೊಂದರೆ ಇತ್ತೇ ಎಂದು ಕೇಳಲು ಸಾಕ್ಷಿ ನಾನು ಹೇಳಿಲ್ಲ ಎಂದು ನುಡಿಯುತ್ತಾರೆ.

11. ನನಗೆ ಚೆಕ್ಕು ವ್ಯವಹಾರಗಳ ಬಗ್ಗೆ ಮಾಹಿತಿ ಇದೆ. ಪ್ರತಿವಾದಿ ನಂ.1 ರವರು ಯಾವತ್ತಿಗೂ ನಿ.ಪಿ.1 ಮತ್ತು 2 ಚೆಕ್ಕುಗಳನ್ನು ವಾದಿಗಳ ಹೆಸರಿಗೆ ನೀಡಿಲ್ಲ ಎಂದರೆ ಸರಿಯಲ್ಲ.

12. ನಿ.ಪಿ.1 ರಲ್ಲಿರುವ ಸಹಿ ಮತ್ತು ಹಣವನ್ನು ಬರೆದಂತಹ ಶಾಹಿ ಒಂದೇ ರೀತಿಯಾಗಿದೆ ಮತ್ತು ದಿನಾಂಕ ಮತ್ತು ಹೆಸರನ್ನು

ಬರೆದಂತಹ ಶಾಹಿ ಬೇರೆ ಇದೆ ಎಂದರೆ ಸರಿ. ಸಹಿಯನ್ನು ಬಿಟ್ಟರೆ ದಿನಾಂಕ ಮತ್ತು ಹೆಸರು ಒಂದು ಶಾಹಿಯಲ್ಲಿದೆ ಮತ್ತು ಹಣವನ್ನು ನಂಬರು ಮತ್ತು ಅಕ್ಷರಗಳಲ್ಲಿ ಬರೆದಿದ್ದು ಒಂದು ಶಾಹಿಯಲ್ಲಿದೆ ಎಂದರೆ ನನ್ನ ಹೆಸರು ಮತ್ತು ದಿನಾಂಕ ಒಂದು ಶಾಹಿಯಲ್ಲಿದೆ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರಿದು ಹೆಸರು ಮತ್ತು ದಿನಾಂಕವನ್ನು ಪ್ರತಿವಾದಿ ನಂ.1 ರವರ ಸ್ಟಾಫ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

13. ನಿ.ಪಿ.2 ರಲ್ಲಿ ಹೆಸರು ಮತ್ತು ದಿನಾಂಕವನ್ನು ಪ್ರತಿವಾದಿ ನಂ.1 ರವರು ಬರೆದಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ ನಂ.1 ರವರ ಸ್ಟಾಫ್ ಬರೆದಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ಪ್ರತಿವಾದಿ ನಂ.1 ರವರು ಮತ್ತು ಅವರ ಸ್ಟಾಫ್ ಯಾವಾಗ ಬರೆದಿರುತ್ತಾರೆ ಎಂದು ದಿನಾಂಕ, ತಿಂಗಳು ಮತ್ತು ವರ್ಷ ನೆನಪಿಲ್ಲ.

14. ಚಂದ್ರಶೇಖರ್ ರವರು ಪಾರ್ಥಸಾರಥಿಯವರ ಹತ್ತಿರ ರೂ.2,50,000/- ಸಾಲ ಪಡೆದಿದ್ದಾರೆ ಎಂದರೆ ಸಾಕ್ಷಿ ಅದಕ್ಕೂ ಇದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ. ನಿ.ಪಿ.1 ಮತ್ತು 2 ಚೆಕ್ಕುಗಳನ್ನು ಪಾರ್ಥಸಾರಥಿಯವರಿಗೆ ರೂ.2,50,000/- ಸಾಲಕ್ಕೆ ಭದ್ರತೆಗಾಗಿ ಸಹಿ ಮಾಡಿದ ಖಾಲಿ ಚೆಕ್ಕುಗಳನ್ನು ನೀಡಿದ್ದರು ಎಂದರೆ ಸರಿಯಲ್ಲ. ಖಾಲಿ ಸಹಿ ಮಾಡಿ ನೀಡಿದ ಖಾಲಿ ಚೆಕ್ಕುಗಳನ್ನು ನೀಡುವ ಸಂದರ್ಭದಲ್ಲಿ ನಾನು ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು

ಅವರು ಸಹಿ ಮಾಡಿ ತುಂಬಿಸಿ ನೀಡಿರುವ ಚೆಕ್ಕುಗಳನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

15. ನಿ.ಪಿ.1 ಮತ್ತು 2 ಚೆಕ್ಕುಗಳನ್ನು ಯಾವಾಗ ನೀಡಿದ್ದಾರೆ ಎಂದು ನನಗೆ ಈಗ ನೆನಪಿಲ್ಲ. ನಿ.ಪಿ.1 ಮತ್ತು 2 ಚೆಕ್ಕುಗಳಲ್ಲಿಯೂ ಹೆಸರುಗಳನ್ನು ಕಲಾವತಿ ಅಥವಾ ಪಾರ್ಥಸಾರಥಿಯವರ ಹೆಸರನ್ನು ಬರೆದುಕೊಳ್ಳಿ ಎಂದು ಹೇಳಿ ನೀಡಿರುತ್ತಾರೆ. ಹಣ ಮತ್ತು ದಿನಾಂಕವನ್ನು ಸಹಿಯುಳ್ಳ ಚೆಕ್ಕಿಗೆ ಪ್ರತಿವಾದಿ ನಂ.1 ರವರ ಸ್ಟಾಫ್ ಬರೆದಿದ್ದು ಯಾರ ಹೆಸರಿಗಾದರೂ ಚೆಕ್ಕನ್ನು ಬರೆಯಿರಿ ಎಂದು ಹೇಳಿದಂತೆ ಪ್ರತಿವಾದಿ ನಂ.1 ರವರ ಸಮಕ್ಷಮ ಅಂಬಾಬಾಯಿಯವರ ಹೆಸರು ಬರೆದಿರುತ್ತಾರೆ. ಸಹಿ ಮಾತ್ರ ಒಂದು ಶಾಹಿಯಲ್ಲಿದ್ದು ಉಳಿದ ಬರಹಗಳು ಬೇರೆ ಶಾಹಿಯಲ್ಲಿದೆ ಎಂದರೆ ಪ್ರತಿವಾದಿ ನಂ.1 ರವರ ಉಳಿದ ಬರಹಗಳನ್ನು ಅವರ ಸ್ಟಾಫ್ ನ ಮುಖಾಂತರ ಬರೆಸಿರುತ್ತಾರೆ ಎಂದು ನುಡಿಯುತ್ತಾರೆ. ಅದನ್ನು ಸ್ಟಾಫ್ ಮುಖಾಂತರ ಬರೆಸುವಾಗ ನಾನೂ ಇದ್ದೆ. ಆ ಸಂದರ್ಭದಲ್ಲಿ ವಾದಿಗಳು ಯಾರೂ ಇರಲಿಲ್ಲ. ನಿ.ಪಿ.1 ರಲ್ಲಿ ಅಂಬಾಬಾಯಿ ಎಂದು ಬರೆದಿರುವ ಬರವಣಿಗೆ ಪ್ರತಿವಾದಿ ನಂ.1 ರವರ ಸ್ಟಾಫ್ ನದ್ದಾಗಿರುತ್ತದೆ. ಮೊಬಲಗನ್ನು ಅಕ್ಷರದಲ್ಲಿ ಅವರ ಸ್ಟಾಫೇ ಬರೆದಿರುತ್ತಾರೆ.

16. ನಿ.ಪಿ.1 ಮತ್ತು 2 ಚೆಕ್ಕು ಪ್ರತಿವಾದಿ ನಂ.1 ರವರ ಖಾತೆಗೆ ಸೇರಿದ್ದಾಗಿರುತ್ತದೆ. ಪ್ರತಿವಾದಿ ನಂ.1 ರವರಿಗೆ ಸೇರಿದ ಚೆಕ್ಕುಗಳು ಅಲ್ಲ ಎಂದರೆ ಸರಿಯಲ್ಲ.

17. ಪಾರ್ಥಸಾರಥಿಗೆ ರೂ.2,50,000/-ವನ್ನು ಬಿಟ್ಟರೆ ಪ್ರತಿವಾದಿ ನಂ.1 ರವರು ಹೆಚ್ಚಿಗೆ ಕೊಡಬೇಕಿಲ್ಲ ಎಂದರೆ ಸರಿಯಲ್ಲ. 2015 ರಲ್ಲಿ ನೀಡಿದ ಚೆಕ್ಕನ್ನು 2018 ರಲ್ಲಿ ನಮಗೆ ಇಷ್ಟ ಬಂದಂತೆ ಬರೆದು ಬ್ಯಾಂಕಿಗೆ ಹಾಕಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.1 ಮತ್ತು 2 ಕ್ಕೆ ಸಂಬಂಧಿಸಿದಂತೆ ವಾದಿಯವರಿಗೆ ಪ್ರತಿವಾದಿಗಳು ಹಣವನ್ನು ನೀಡಲು ಬಾಧ್ಯರಲ್ಲ ಮತ್ತು ಅವರಿಗೂ ಅದಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಮಂಜುಳಾರವರು ಈ ವ್ಯವಹಾರಕ್ಕೆ ಯಾವತ್ತಿಗೂ ಭಾಗಿಯಾಗಿರಲಿಲ್ಲ ಎಂದರೆ ಸರಿ. ಪಾರ್ಥಸಾರಿಥಿಯವರಿಗೆ ಸಾಲದ ಹಣ ರೂ.2,50,000/-ವನ್ನು ಬಿಟ್ಟರೆ ಪ್ರತಿವಾದಿ ನಂ.1 ರವರು ಅದಕ್ಕಿಂತ ಹೆಚ್ಚು ಬೇರೆ ಯಾವ ಹಣವನ್ನು ಕೊಡಬೇಕಿಲ್ಲ ಎಂದರೆ ಸರಿಯಲ್ಲ.

18. ನಿ.ಪಿ.1 ಮತ್ತು 2 ರಲ್ಲಿ ಪ್ರತಿವಾದಿ ನಂ.1 ರವರ ಸಹಿ ಬಿಟ್ಟರೆ ಬೇರೆ ಯಾವುದರಲ್ಲೂ ಅವರ ಸಹಿ ಇಲ್ಲ ಎಂದರೆ ಸರಿ. ನಾನು ಮತ್ತು ವಾದಿಗಳು ಸೇರಿ ಕಲಾವತಿಯವರಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸಾಕ್ಷಿಯು ನಾನು ಮತ್ತು ಪಾರ್ಥಸಾರಿಥಿಯವರು ಮಾತ್ರ ಅಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ನಾನು ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ನಿ.ಪಿ.1 ಮತ್ತು 2 ಚೆಕ್ಕುಗಳನ್ನು ಉಪಯೋಗಿಸಿ ಈ ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ನಾನು ಬೇರೆ ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡುವುದಿಲ್ಲ. ನಿ.ಪಿ.1 ಮತ್ತು 2 ರಲ್ಲಿ ಪ್ರತಿವಾದಿ ನಂ.2 ರವರ ಸಹಿ ಇಲ್ಲ ಎಂದರೆ ಸರಿ. ಪ್ರತಿವಾದಿ ನಂ.2 ಮತ್ತು ಎಸ್.ಎಲ್.ವಿ ಚಿಟ್

ಫಂಡ್ ರವರ ವಿರುದ್ಧ ಹೂಡಿದ ದಾವೆಯು ಕಾನೂನಿನಂತೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಮಾಡುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು.**